ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸ:ಕೇಕ:ಆಡಳತ:ಸೇನಿ: 225 :2018-19

ದಿನಾಂಕ: 29 -12-2018
01-01-2019

## ಸುತ್ತೋಲೆ ಸಂಖ್ಯೆ : 1646

ವಿಷಯ: ನಿಗಮದ ಅಧಿಕಾರಿ/ನೌಕರರು ಪಾಸ್‌ಪೋರ್ಟ್ ಪಡೆಯಲು ಮಾಹಿತಿ ನೀಡುವ ಬಗ್ಗೆ ನಿರ್ದೇಶನಗಳು.

ಉಲ್ಲೇಖ: 1 ಸುತ್ತೋಲೆ ಸಂಖ್ಯೆ: 1580, ದಿನಾಂಕ: 26-02-2016
2 ಕೇಂದ್ರ ಸರ್ಕಾರದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ವಿ ಐ /401/01/05/2014 ದಿನಾಂಕ: 26-05-2015

- - - -

ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ್ದ ಅಧಿಕೃತ ಜ್ಞಾಪನಾ ಪತ್ರದಲ್ಲಿನ ನಿರ್ದೇಶನಗಳಂತೆ ನಿಗಮದ ಅಧಿಕಾರಿ/ನೌಕರರು ಪಾಸ್‌ಪೋರ್ಟ್ ಪಡೆಯಲು ಮಾಹಿತಿ ನೀಡುವ ಬಗ್ಗೆ ಉಲ್ಲೇಖ-1 ರ ಸುತ್ತೋಲೆಯಲ್ಲಿ ನಿರ್ದೇಶನಗಳನ್ನು ನೀಡಲಾಗಿದೆ. ಆದರೆ, ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು ಪಾಸ್‌ಪೋರ್ಟ್ ನಿಯಮಾವಳಿ 1980 ನ್ನು ತಿದ್ದುಪಡಿ ಮಾಡಿ ಹೊರಡಿಸಿರುವ ಅಧಿಸೂಚನೆಯಲ್ಲಿ ಅನುಬಂಧಗಳನ್ನು ಬದಲಾವಣೆ ಮಾಡಿದ್ದು, ಸದರಿ ಅನುಬಂಧಗಳನ್ನು ಲಗತ್ತಿಸಲಾಗಿದೆ.

ಸರ್ಕಾರಿ ನೌಕರರು ಪಾಸ್‌ಪೋರ್ಟ್ ಪಡೆಯುವ ಸಲುವಾಗಿ ಆಡಳಿತ ನಿಯಂತ್ರಣಕ್ಕೆ ಒಳಪಟ್ಟ ಪ್ರಾಧಿಕಾರಕ್ಕೆ ಮಾಹಿತಿ ನೀಡಲು ನಿಗದಿಪಡಿಸಿದ್ದ ಅನುಬಂಧ-ಎನ್ ಬದಲಾಗಿ ಅನುಬಂಧ-ಹೆಚ್ ನ್ನು ನಿಗದಿಪಡಿಸಲಾಗಿದೆ.

ಸದರಿ **ಅನುಬಂಧ-ಹೆಚ್** ನಲ್ಲಿ ಸರ್ಕಾರಿ ನೌಕರರು ಪಾಸ್‌ಪೋರ್ಟ್ ಪಡೆಯುವ ಸಲುವಾಗಿ ಆಡಳಿತ ನಿಯಂತ್ರಣಕ್ಕೆ ಒಳಪಟ್ಟ ಪ್ರಾಧಿಕಾರದಿಂದ ಮಾಹಿತಿ ಪತ್ರಕ್ಕೆ ಸಹಿ ಹಾಗೂ ಮೊಹರು ದಾಖಲಿಸಿ ಪಾಸ್‌ಪೋರ್ಟ್ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ. ಆದ್ದರಿಂದ, ಸರ್ಕಾರದ ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು ನಿಗದಿಪಡಿಸಿರುವ ಅನುಬಂಧಗಳಂತೆ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಲಾಗಿದೆ. ಉಳಿದಂತೆ, ಸುತ್ತೋಲೆ ಸಂಖ್ಯೆ: 1580, ದಿನಾಂಕ: 26-02-2016 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

ಅಡಳಿ: ಮೇಲಿನಂತೆ

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

ಪ್ರತಿ ಮಾಹಿತಿಗಾಗಿ:

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.



Scanned by CamScanner

## ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಬೆಂಗಳೂರು

ಸಂಖ್ಯೆ:ಬೆಂಮಸಾಸಂ/ಕೇಕ/ಸಿಬ್ಬಂದಿ/ 6398 /2018-19 ದಿನಾಂಕ: 21-03-2019

ಉಲ್ಲೇಖ: 1) ಸಂಖ್ಯೆ:ಕರಾಸಾ:ಕೇಕ: ಆಡಳತ:ಸೇನಿ: 225: 2018-19 ದಿನಾಂಕ: 01.01.2019
2) ಸೂಕ್ತಾಧಿಕಾರಿಗಳ ಆದೇಶ ದಿನಾಂಕ: 18.03.2019

* * * * * * * * *

ಸೂಕ್ತಾಧಿಕಾರಿಗಳ ಆದೇಶದಂತೆ, ಕ.ರಾ.ರ.ಸಾ.ಸಂಸ್ಥೆಯಿಂದ ಹೊರಡಿಸಿರುವ ಸುತ್ತೋಲೆ ಸಂಖ್ಯೆ: 1646 ಸಂ: ಕರಾರ: ಆಡಳತ: ಸೇನಿ: 225: 2018-19 ದಿನಾಂಕ: 01.01.2019 ರಲ್ಲಿರುವ ನಿರ್ದೇಶನಗಳನ್ನು ಬೆಂ.ಮ.ಸಾ.ಸಂಸ್ಥೆಯಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ. ಅದರಂತೆ ಕ್ರಮ ಜರುಗಿಸುವುದು.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು

ಪ್ರತಿಯನ್ನು

1) ಮಾನ್ಯ ಅಧ್ಯಕ್ಷರು, ಬೆಂ.ಮ.ಸಾ.ಸಂಸ್ಥೆ ರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು(ಭ:ಜಾ)/ ನಿರ್ದೇಶಕರು (ಮಾ:ತಂ)ರವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರು ಮಾಹಿತಿಗಾಗಿ.
3) ಎಲ್ಲಾ ಇಲಾಖಾ ಮುಖ್ಯಸ್ಥರು, ಬೆಮಸಾಸಂಸ್ಥೆ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು/ಪ್ರಾಂಶುಪಾಲರು/ ಕಾರ್ಯ ವ್ಯವಸ್ಥಾಪಕರು/ ಎಲ್ಲಾ ಘಟಕ ವ್ಯವಸ್ಥಾಪಕರು, ಬೆಮಸಾಸಂಸ್ಥೆ ರವರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

Scanned by CamScanner